ಶ್ರೀ ಎಸ್. ರಾಜೇಂದ್ರನ್:– ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ ಪಾಪ, ಅವರಿಗೆ ಅಷ್ಟು ಗೊತ್ತಿಲ್ಲ ಸದರಿ ವಿಷಯ ಕುರಿತು ನಾನು ಸ್ವಲ್ಪ explain ಮಾಡುತ್ತೇನೆ. ಹಾಗೆಯೇ ಇದು ನನ್ನ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರವಾಗಿದೆ.

M.R. SPEAKER:- No, no. ಅವರು ಹೇಳಿದ್ದಾರೆ. ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೆ. ಅವರ ಪರವಾಗಿ ಅವರೇ ವಿಷಯ ಪ್ರಸ್ತಾಪ ಮಾಡಿದ್ದಾರೆ. ಅವರ ಪರವಾಗಿ ನೀವು explain ಮಾಡಬೇಕೇಂದೇನೂ ಇಲ್ಲ ಅವರು ಏನು ತಿಳಿಬೇಕೋ ಅದನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ಎಸ್. ರಾಜೇಂದ್ರನ್:– ಮಾನ್ಯ ಅಧ್ಯಕ್ಷರೆ, ಇದು ನನ್ನ ಕ್ಷೇತ್ರದ ಸಮಸ್ಯೆ ಆಗಿದೆ.

ಅಧ್ಯಕ್ಷರು:– ನಿಯಮಗಳನ್ನು ಪಾಲಿಸಬೇಕು. ದಯಮಾಡಿ ಕುಳಿತುಕೊಳ್ಳಿ ರಾಜೇಂದ್ರನ್‌ರವರೆ.

ಶ್ರೀ ಎಸ್. ರಾಜೇಂದ್ರನ್:– ದಯಮಾಡಿ ತಾವು ಸಿಟ್ಟು ಮಾಡಿಕೊಳ್ಳಬಾರದು. ಅದು ಕೇಂದ್ರ ಸರ್ಕಾರದ ಜಾಗ ಹೇಗೆ ಮಾಡಬೇಕೆಂಬುದನ್ನು ನಾನು ಸರ್ಕಾರಕ್ಕೆ ಹೇಳುತ್ತೇನೆ. ಕೇಂದ್ರ ಸರ್ಕಾರದವರು...

ಅಧ್ಯಕ್ಷರು:– ಅಲ್ರೀ, ಇದಕ್ಕೆ ನಿಯಮಾವಳಿಗಳೇನು ಇಲ್ವೇನ್ರಿ?

ಶ್ರೀ ಎಸ್. ರಾಜೇಂದ್ರನ್:– ದಯವಿಟ್ಟು ತಾವು ತಪ್ಪು ತಿಳಿದುಕೊಳ್ಳಬಾರದು.

ಅಧ್ಯಕ್ಷರು:– ತಪ್ಪು ತಿಳಿದುಕೊಳ್ಳುವ ಪ್ರಶ್ನೆ ಅಲ್ಲ ನೀವುಗಳು ನಿಯಮದಂತೆ....

ಶ್ರೀ ಎಸ್. ರಾಜೇಂದ್ರನ್:– ಕೇಂದ್ರ ಸರ್ಕಾರದವರು ಈ ಜಾಗ ನಮ್ಮದು ಎಂದು ಹೇಳುತ್ತಾರಾ? ಅಲ್ಲಿ ಇರುವವನು ಜಾಗ ಪಾಲ್ ಲೂಯಿಸ್ ನಮ್ಮದು ಎಂದು ಹೇಳಿದ್ದಾರೆ ಅಲ್ಲಿರುವ ಸುಮಾರು 40 ಕ್ರಾಸ್‌ಗಳನ್ನು bulldozer ತೆಗೆದುಕೊಂಡು ಹೋಗಿ demolish ಮಾಡಿದ್ದಾರೆ. ಇದು it is paining for the entire Christian community, it is a lengthy period. 40 ದಿವಸ ಅವರು ಉಪವಾಸ ಇರುವ ಸಂದರ್ಭದಲ್ಲಿ ಇಂಥ ಘಟನೆಗಳನ್ನು ಮಾಡಿದರೆ ಅದಕ್ಕೆ ಪೊಲೀಸ್‌ನವರು ಶಾಮೀಲಾಗಿ ಅವರ ಜೊತೆ ಹೋಗಿದ್ದಾರೆಂದರೆ You must take the BGML Management to task to file a case against them. ಆದ್ದರಿಂದ ಅದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು.

ಡಾ: ಹೆಚ್. ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಿಸಿದ ಸಂಪೂರ್ಣವಾದ ವರದಿಯನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ.

(ಅ) ವಿಷಯ : ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷರು ಲಂಚ ಪಡೆಯುವಾಗ ಲೋಕಾಯುಕ್ತರ ಬಲೆಗೆ ಬಿಕ್ಕಿಬಿದ್ದಿರುವ ಕುರಿತು.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ):– ಮಾನ್ಯ ಅಧ್ಯಕ್ಷರೆ, ಅಲ್ಪಸಂಖ್ಯಾತರನ್ನು ಉದ್ಧಾರ ಮಾಡಬೇಕು. ಅವರ ಬದುಕನ್ನು ಮೇಲ್ಮಟ್ಟಕ್ಕೆ ತರಬೇಕೆಂದು ಸರ್ಕಾರ ಸಾಕಷ್ಟು ನೆರವನ್ನು ಕೊಡುತ್ತಿದೆ. ಇದಕ್ಕಾಗಿ ಬೇರೆ ಒಂದು ನಿಗಮವನ್ನೂ ಸಹ ಮಾಡಲಾಗಿದೆ. ಸರ್ಕಾರದಿಂದ ಸಾಕಷ್ಟು ಹಣ ಹೋಗಿದೆ. ಇಷ್ಟು ವರ್ಷಗಳಲ್ಲಿ ಅವರ ಬದುಕು ಮೇಲ್ಮಟ್ಟಕ್ಕೆ ಬರಲಿಲ್ಲ. ಏಕೆಂದರೆ, ಈ ಹಣ ಅವರಿಗೆ ನೇರವಾಗಿ ತಲುಪಲಿಲ್ಲವೆನ್ನುವುದಕ್ಕೆ ಒಂದು ಉದಾಹರಣೆ ನಿನ್ನೆ ನಡೆದಂಥ ಘಟನೆಯಾಗಿದೆ. ಈ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷರು ನಿನ್ನೆಯ ದಿವಸ ಲಂಚ ಪಡೆಯುವಾಗ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ. ಇದು ಸರ್ಕಾರಕ್ಕೆ ದೊಡ್ಡ ಅವಮಾನದ ಪ್ರಸಂಗ. ಏಕೆಂದರೆ ಸರ್ಕಾರದಿಂದ ನೇಮಕವಾಗಿರುವ ಇವರು ಯಾರೋ officials ಅಥವಾ ಅಧಿಕಾರಿಗಳಲ್ಲ.

ಅಧ್ಯಕ್ಷರು:– ಶ್ರೀ ಆರಗ ಜ್ಞಾನೇಂದ್ರರವರೆ, ಸರ್ಕಾರಕ್ಕೆ ಅವಮಾನವಾಗಿದೆ ಎಂದು ತಾವು ಭಾವಿಸಬಾರದು. ಯಾರನ್ನೋ ನಂಬಿಕೆಯಿಂದ ಯೋಗ್ಯರು, ಒಳ್ಳೆಯವರು, ಧರ್ಮರಾಯರೆಂದು ಭಾವಿಸಿಕೊಂಡು ನೇಮಿಸುತ್ತಾರೆ. ಆದರೆ ಈ ತರಹ ಕೆಲಸ ಮಾಡಿದರೆ ಆಗುವುದಿಲ್ಲ. ಅದಕ್ಕೆ ಸರ್ಕಾರ ಅದನ್ನು prestigious ಆಗಿ ತೆಗೆದುಕೊಳ್ಳಬಾರದು. ಈಗ ಸಹಜವಾಗಿ ನೇಮಕ ಮಾಡುವಾಗ ಒಳ್ಳೆಯವರೆಂದು ಮಾಡುತ್ತಾರೆ. ಅವರು ಕೆಟ್ಟ ಕೆಲಸ ಮಾಡಿದರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಸರ್ಕಾರದ ಆದೇಶದಲ್ಲಿ 'ಧರ್ಮರಾಯರು' ಎನ್ನುವ ಆದೇಶ ಏನಾದರೂ ಇದೆಯೇ?

ಅಧ್ಯಕ್ಷರು:– ಹಾಗಲ್ಲ ವಾಟಾಳ್ ನಾಗರಾಜ್‌ರವರೆ, ಈಗ ಒಳ್ಳೆಯವರೆಂದರೆ ಕೆಲಸ ಮಾಡುವವರು, ತಿಳುವಳಿಕೆ ಇರುವವರು, ಧರ್ಮವಾಗಿ ನಡೆದುಕೊಳ್ಳುತ್ತಾರೆ ಎನ್ನುವ ದೃಷ್ಟಿಯಿಂದ ತಾನೇ ಆ ತರಹ ಹೇಳುವುದು.

ಶ್ರೀ ಆರಗ ಜ್ಞಾನೇಂದ್ರ:– ಇಲ್ಲಿ ಏನಾಗುತ್ತದೆ ಎಂದರೆ, ಆಯ್ಕೆ ಮಾಡಿ ಕೆಲವರನ್ನು ನೇಮಕ ಮಾಡುವಾಗಲೂ ಕೂಡ ಸರ್ಕಾರ ಗಂಭೀರವಾಗಿ ಅವರ ಹಿನ್ನೆಲೆಯನ್ನು ನೋಡಿ ನೇಮಕ ಮಾಡಬೇಕಾಗುತ್ತದೆ. ರಾಜಕಾರಣಕ್ಕೋಸ್ಕರ ನೇಮಕ ಮಾಡಿದಾಗ ಅಥವಾ ಯಾರೋ ಹೇಳಿದರು, ಅವರು ಯಾರದೋ ಸಂಬಂಧ ಅಥವಾ ಯಾರದೋ ಬಳಗ ಎಂದು ನೇಮಕ ಮಾಡಿದರೆ ಆಗುವಂಥದ್ದು ಇದು ಎಂಬುದು ನನ್ನ ಅನಿಸಿಕೆಯಾಗಿದೆ. ನಿನ್ನೆಯ ದಿವಸ ಆಟೋರಿಕ್ಷಾ ಕೊಡುತ್ತೇವೆಂದು ಸುಮಾರು 75 ಸಾವಿರ ರೂಪಾಯಿಗಳ ಲಂಚವನ್ನು ಪಡೆಯುತ್ತಿದ್ದಾಗ ಸಿಕ್ಕಿಹಾಕಿಕೊಂಡಿದ್ದಾರೆ. Karnataka Integrated Welfare Society ಪರವಾಗಿ ನಜೀರುಲ್ಲಾ ಎನ್ನುವವರು ಒಬೇದುಲ್ಲಾ ಷರೀಫ್ ಎನ್ನುವ ಅಧ್ಯಕ್ಷರ ಮೇಲೆ Complaint ಮಾಡಿದ್ದರು. ಲೋಕಾಯುಕ್ತ ಅಧಿಕಾರಿಗಳ ಜೊತೆಗೆ ಹೋಗಿ 75 ಸಾವಿರ ರೂಪಾಯಿಗಳನ್ನು ಸ್ವತಃ ಒಬೇದುಲ್ಲಾ ಷರೀಫ್‌ರವರ ಮನೆಯಲ್ಲಿಯೇ ಕೊಟ್ಟಾಗ, ಆ ಹಣವನ್ನು

ಸ್ವತಃ ತೆಗೆದುಕೊಂಡು ಅವರ ಟೇಬಲ್‌ನಲ್ಲಿ ಇಟ್ಟುಕೊಂಡಿದ್ದಾರೆ. ಆಗ ತಕ್ಷಣ ಲೋಕಾಯುಕ್ತ ಪೊಲೀಸರು ಹೋಗಿ ಹಿಡಿದಿದ್ದಾರೆ. ಅಲ್ಲಿ witness ಕೂಡ ಬಂದಿದೆ, ಕೈಯಲ್ಲಿದ್ದ ಬಣ್ಣ ಕೂಡ ಬಂದಿದೆ. ನಾನು ಹೇಳುವುದೇನೆಂದರೆ, ಯಾರು ಅಲ್ಪಸಂಖ್ಯಾತರ ಬಡವರಿದ್ದಾರೆ ಅವರ ಬದುಕಿನ ಮೇಲೆ ಹೊಡೆದು ಇವರು ಯಾರೋ ತಿಂದು ಹೊಟ್ಟೆ ಹೊರೆಯುವಂಥ ಕೆಲಸವನ್ನು ಮಾಡುತ್ತಾರೆನ್ನುವುದಾದರೆ ಸರ್ಕಾರ ಏನು ಮಾಡುತ್ತಿದೆ? ನಿನ್ನೆ ಆಗಿರುವಂಥದ್ದು ಎಲ್ಲರೂ ತಲೆತಗ್ಗಿಸುವಂಥ ವಿಚಾರವಾಗಿದೆ. ಇದನ್ನು ಸರ್ಕಾರಿ ಅಧಿಕಾರಿ ಮಾಡಿರುವಂಥದ್ದಲ್ಲ. ಇದನ್ನು ಒಬ್ಬ ರಾಜಕಾರಣಿ ಮಾಡಿರತಕ್ಕಂಥದ್ದು. ಆದ್ದರಿಂದ ಒಬೇದುಲ್ಲಾ ಷರೀಫ್‌ರನ್ನು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧ್ಯಕ್ಷ ಸ್ಥಾನದಿಂದ ಅವರನ್ನು ತತ್‌ಕ್ಷಣವೇ ಸರ್ಕಾರ ಕೈಬಿಡುತ್ತದೆಯೇ? ಈ ಬಗ್ಗೆ ತಕ್ಷಣ ಸರ್ಕಾರ ತನ್ನ ಹೇಳಿಕೆಯನ್ನು ನೀಡುತ್ತದೆಯೇ? ನಿನ್ನೆಯ ದಿವಸ ಅರೆಸ್ಟ್ ಆಗಿದ್ದಾರೆ. ನಿಷ್ಪಕ್ಷಪಾತವಾದಂಥ ತನಿಖೆ ಆಗುತ್ತದೆಯೇ? ಏಕೆಂದರೆ ಅವರ ಅಧಿಕಾರಾವಧಿಯಲ್ಲಿ ಇನ್ನೆಷ್ಟು ಅವ್ಯವಹಾರ ಮಾಡಿದ್ದಾರೆ? ಇದನ್ನೂ ಕೂಡ ತನಿಖೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ವಿವರವಾದ ವರದಿಯನ್ನು ತರಿಸಿಕೊಂಡು ಅದರ ಮೇಲೆ ಸರ್ಕಾರದ ನಿಲುವೇನು ಎನ್ನುವುದನ್ನು ಹೇಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಈಗಾಗಲೇ ಇದು ಜಗತ್ತಿಗೇ ಗೊತ್ತಿರುವಂಥ ವಿಚಾರವಾಗಿದೆ. ಅವರನ್ನು ಲೋಕಾಯುಕ್ತದವರು ಹಿಡಿದಿದ್ದು ಅವರು ಜೈಲಿನಲ್ಲಿದ್ದಾರೆ. ಎಲ್ಲವೂ ಸಿಕ್ಕಿಬಿದ್ದಿದೆ. ಅದಕ್ಕೆ ನಿಷ್ಪಕ್ಷಪಾತವಾದ ತನಿಖೆಯಾಗಬೇಕು. ಅದಕ್ಕಾಗಿ ಅವರನ್ನು ಆ ಅಧ್ಯಕ್ಷ ಸ್ಥಾನದಿಂದ ಇಳಿಸಿ ನಿಷ್ಪಕ್ಷಪಾತವಾದ ತನಿಖೆ ಆಗಲಿ. ನಂತರ ಅವರು ಪ್ರಮಾಣಿಕರು, ಏನೂ ಆಗಿಲ್ಲ ಎಂದರೆ ಅದು ಬೇರೆ ವಿಷಯ. ಆದ್ದರಿಂದ ನಿಷ್ಪಕ್ಷಪಾತವಾದ ತನಿಖೆಗೋಸ್ಕರ ಇವರು ಮುಂದುವರಿಯಬಾರದು ಮತ್ತು ಇನ್ನು ಎಷ್ಟು ವಿಚಾರಗಳಿವೆಯೋ ಅದು ಬಹಿರಂಗವಾಗಬೇಕೆನ್ನುವ ದೃಷ್ಟಿಯಿಂದ ತಕ್ಷಣ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿದರೆ ನಿಷ್ಪಕ್ಷಪಾತವಾಗಿ ತನಿಖೆಯಾಗುತ್ತದೆ ಇದರಲ್ಲಿ ಏನು ವರದಿ ತರಿಸಿಕೊಳ್ಳುವುದು ಇದೆ? ಇದರ ಬಗ್ಗೆ ಸರ್ಕಾರ ಏನು ಮಾಡುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಈಗ ಅದರ ಬಗ್ಗೆ ನಮಗೆ ವಿವರವಾದಂಥ ವರದಿ ಬೇಕು. ಆ ವಿವರವಾದ ವರದಿಯನ್ನು ಸಂಬಂಧಪಟ್ಟ ಇಲಾಖೆಯಿಂದ ತರಿಸಿಕೊಂಡು ಸರ್ಕಾರ ಏನು ತೀರ್ಮಾನ ಮಾಡಬೇಕೆನ್ನುವುದನ್ನು ನೋಡಿ ಮಾಡುತ್ತದೆ. ಆದ್ದರಿಂದ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಈ ಬಗ್ಗೆ ನಾಳೆ ಹೇಳುತ್ತೇನೆ.